
REGISTERED WITH RNI NEW DELHI REG. N0.69683/97-Postal Registration No.RNP/KA/BGS/2259/2021-2023
Office of Posting: Bangalore PSO, Bangalore - 560026.; Date of Posting & Publishing Every Wednesday; Price Rs. 2 (Pages-8)

ಪಟ್ಟಣ ಸಹಕಾರ ಬ್ಯಾಂಕುಗಳ
# ವಾರ್ತಾ ಪತ್ರಿಕೆ

ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳದ ಅಧಿಕೃತ ವಾರಪತ್ರಿಕೆ

ಸಂಪುಟ : 29 । ಸಂಚಿಕೆ : 40 । ಜನವರಿ 11, 2023 । ಬುಧವಾರ । ಪುಟಗಳು : 8 । ಬೆಲೆ : 2/-

## ಪಟ್ಟಣ ಸಹಕಾರ ಬ್ಯಾಂಕುಗಳ 35ನೇ ಸ್ಥಾಯಿ ಸಲಹಾ ಸಮಿತಿ ಸಭೆ (Standing Advisory Committee)



**ಮುಂಬಯಿ :** ದಿನಾಂಕ : 06.01.2023ರಂದು ಮುಂಬಯಿನ ಭಾರತೀಯ ರಿಸರ್ವ್ ಬ್ಯಾಂಕಿನ ಕೇಂದ್ರ ಕಛೇರಿಯ ಕಾನ್ಫರೆನ್ಸ್ ಹಾಲ್‌ನಲ್ಲಿ ಪಟ್ಟಣ ಸಹಕಾರ ಬ್ಯಾಂಕುಗಳ 35ನೇ ಸ್ಥಾಯಿ ಸಲಹಾ ಸಮಿತಿ ಸಭೆಯು ಭಾರತೀಯ ರಿಸರ್ವ್ ಬ್ಯಾಂಕಿನ ಡೆಪ್ಯುಟಿ ಗವರ್ನರ್ ರವರಾದ ಶ್ರೀ ಎಂ. ರಾಜೇಶ್ವರ ರಾವ್ ರವರ ಅಧ್ಯಕ್ಷತೆಯಲ್ಲಿ ಜರುಗಿತು. ಈ ಸಭೆಯಲ್ಲಿ ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳದ ಅಧ್ಯಕ್ಷರಾದ ಶ್ರೀ ಎಚ್.ಕೆ. ಪಾಟೀಲ ರವರು ಭಾಗವಹಿಸಿ ಮಾತನಾಡುತ್ತಾ ಮೂರು ವರ್ಷಗಳ ನಂತರ ಸಭೆಯನ್ನು ಕರೆದುದಕ್ಕೆ ರಿಜರ್ವ್ ಬ್ಯಾಂಕಿಗೆ ಧನ್ಯವಾದವನ್ನು ಸಲ್ಲಿಸುತ್ತಾ, ಇಂತಹ ಸಭೆ ಆಗಿಂದಾಗ್ಗೆ ಕರೆಯುವುದರಿಂದ ಪಟ್ಟಣ ಸಹಕಾರ ಬ್ಯಾಂಕುಗಳ ಜ್ವಲಂತ ಸಮಸ್ಯೆಗಳನ್ನು ಚರ್ಚಿಸಿ ಪರಿಹಾರ ಕೈಗೊಳ್ಳಲು ಅನುಕೂಲವಾಗುತ್ತದೆ ಎಂದು ಪ್ರಸ್ತಾಪ ಮಾಡಿದರು. ವಾಣಿಜ್ಯ ಬ್ಯಾಂಕುಗಳಿಗೆ ಹೋಲಿಸಿದರೆ ಪಟ್ಟಣ ಸಹಕಾರ ಬ್ಯಾಂಕುಗಳಿಗೆ ಶಾಖೆಗಳನ್ನು ತೆರೆಯಲು ನಿರ್ಬಂಧವಿರುವುದರಿಂದ ಅವುಗಳ ಬೆಳವಣಿಗೆ ಕುಂಠಿತವಾಗುತ್ತಿದೆ. ಶಾಖೆಗಳನ್ನು ತೆರೆಯಲು ಇರುವ ನಿರ್ಬಂಧವನ್ನು ಪ್ರಸ್ತಾಪಿಸದೆ, ಬ್ಯಾಂಕಿಂಗ್ ಕ್ಷೇತ್ರದಲ್ಲಿ ಪಟ್ಟಣ ಸಹಕಾರ ಬ್ಯಾಂಕುಗಳ ಪಾಲು ಕಡಿಮೆಯಾಗುತ್ತಿದೆ ಎಂದು ರಿಜರ್ವ್ ಬ್ಯಾಂಕಿನ ವರದಿಯಲ್ಲಿ ಪ್ರಕಟಿಸುವುದು ಸಮಂಜಸವಲ್ಲ ಎಂಬ ಮಾತನ್ನು ಸಭೆಯಲ್ಲಿ ಮಂಡಿಸಿದರು. ಈ ವರ್ಷ 145 ಪಟ್ಟಣ ಸಹಕಾರ ಬ್ಯಾಂಕುಗಳಿಗೆ ಸಣ್ಣ ಪುಟ್ಟ ಕಾರಣಗಳಿಗೆ ದಂಡವನ್ನು ವಿಧಿಸಿದ್ದು, ಇದರಿಂದ ಈ ಬ್ಯಾಂಕುಗಳು ಮುಂದಿನ ಎರಡು ವರ್ಷಗಳಲ್ಲಿ ಯಾವುದೇ ಶಾಖೆಗಳನ್ನು ತೆರೆಯುವಂತಿಲ್ಲವಾದುದರಿಂದ ಸಹಕಾರ ಬ್ಯಾಂಕಿಂಗ್ ಕ್ಷೇತ್ರದ ಬೆಳವಣಿಗೆ ಮತ್ತಷ್ಟು ಕುಂಠಿತವಾಗುವುದಲ್ಲದೆ, ಸಾರ್ವಜನಿಕರಲ್ಲಿ ಪಟ್ಟಣ ಸಹಕಾರ ಬ್ಯಾಂಕುಗಳ ಬಗ್ಗೆ ತಪ್ಪು ಅಭಿಪ್ರಾಯ ಮೂಡಿಸುತ್ತದೆ ಎಂಬುದನ್ನು ಉಲ್ಲೇಖಿಸಿದರು.

ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆಯ ತಿದ್ದುಪಡಿಯ ನಂತರ ಪಟ್ಟಣ ಸಹಕಾರ ಬ್ಯಾಂಕುಗಳ ನಿರ್ದೇಶಕರ ಅವಧಿ 8 ವರ್ಷಗಳಿಗೆ ಸೀಮಿತವಾಗುವುದರಿಂದ ತಕ್ಷಣಕ್ಕೆ 25000ಕ್ಕಿಂತ ಅಧಿಕ ನಿರ್ದೇಶಕರ ಸ್ಥಾನ ತೆರವಾಗುವುದರಿಂದ ಆ ಸ್ಥಾನಕ್ಕೆ ಹೊಸ ವ್ಯಕ್ತಿಗಳನ್ನು ಹುಡುಕುವುದು ದೊಡ್ಡ ಸಮಸ್ಯೆಯಾಗಲಿದೆ ಎಂಬ ಮಾತನ್ನು ಪುನರುಚ್ಚರಿಸಿದರು. ಆದ್ಯತಾ ವಲಯದ ಸಾಲದ ಗುರಿಯನ್ನು ಏಕಾಏಕಿ ಶೇ.40 ರಿಂದ ಶೇ.75ಕ್ಕೆ ಹೆಚ್ಚಿಸಿದ ರಿಜರ್ವ್ ಬ್ಯಾಂಕಿನ ನಿರ್ಣಯವನ್ನು ಪ್ರಶ್ನಿಸಿ, ಇದರಿಂದ ಪಟ್ಟಣ ಸಹಕಾರ ಬ್ಯಾಂಕುಗಳಿಗೆ ಹಾನಿಯಾಗಲಿದೆ ಎಂದು ನುಡಿದರು. ಮಹಾಮಂಡಳದ ವತಿಯಿಂದ ಪಟ್ಟಣ ಸಹಕಾರ ಬ್ಯಾಂಕುಗಳು ಎದುರಿಸುತ್ತಿರುವ ಅನೇಕ ಸಮಸ್ಯೆಗಳ ಬಗ್ಗೆ ಈಗಾಗಲೇ ತಿಳಿಸಿರುವುದರಿಂದ ಅವುಗಳ ಬಗ್ಗೆ ಚರ್ಚೆ ಮಾಡಿ ಸೂಕ್ತ ಪರಿಹಾರ ಸಿಗಲಿದೆ ಎಂದು ಹಾರೈಸಿದರು.

## ಕಳೆದ ಆರ್ಥಿಕ ವರ್ಷದಲ್ಲಿ ಬ್ಯಾಂಕುಗಳ ವಿರುದ್ಧದ ದೂರುಗಳಲ್ಲಿ ಶೇ.9ರಷ್ಟು ಏರಿಕೆ; ಎಟಿಎಂ ಕಾರ್ಡ್‌ಗಳಿಗೆ ಸಂಬಂಧಿಸಿದವು ಅಧಿಕ




**ಮುಂಬೈ :** ವರ್ಷದಿಂದ ವರ್ಷಕ್ಕೆ ದೇಶದಲ್ಲಿ ಬ್ಯಾಂಕಿಂಗ್ ವಹಿವಾಟು ತೀವ್ರ ಏರಿಕೆಯಾಗುತ್ತಿದ್ದು, ಅತೃಪ್ತ ಗ್ರಾಹಕರ ಸಂಖ್ಯೆಯೂ ಹೆಚ್ಚುತ್ತಿದೆ. 2021ರ ಏಪ್ರಿಲ್–2022ರ ಮಾರ್ಚ್ ನಡುವಿನ ಅವಧಿಯಲ್ಲಿ ಬ್ಯಾಂಕ್‌ಗಳ ವಿರುದ್ಧ ವಿವಿಧ ಒಂಬುಡ್ಸ್‌ಮನ್ ಯೋಜನೆಗಳ ಅಡಿಯಲ್ಲಿ ಸ್ವೀಕರಿಸಲಾದ ಒಟ್ಟು ದೂರುಗಳ ಸಂಖ್ಯೆಯು ಶೇ. 9ಕ್ಕಿಂತ ಹೆಚ್ಚಿದೆ.

ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಬಿಡುಗಡೆ ಮಾಡಿದ ವರದಿ ಪ್ರಕಾರ, ಈ ಪೈಕಿ ಡೆಬಿಟ್ ಕಾರ್ಡ್‌ಗಳು ಮತ್ತು ಮೊಬೈಲ್ ಅಥವಾ ಇಂಟರ್ನೆಟ್ ಬ್ಯಾಂಕಿಂಗ್‌ಗೆ ಸಂಬಂಧಿಸಿದ ಗರಿಷ್ಠ ಸಂಖ್ಯೆಯ ದೂರುಗಳು ದಾಖಲಾಗಿವೆ.

'ಹಿಂದಿನ ಮೂರು ಯೋಜನೆಗಳು ಮತ್ತು ಆರ್‌ಬಿ–ಐಒಎಸ್ (ರಿಸರ್ವ್ ಬ್ಯಾಂಕ್– ಇಂಟಿಗ್ರೇಟೆಡ್ ಒಂಬುಡ್ಸ್‌ಮನ್‌ಸ್ಕೀಮ್) ಅಡಿಯಲ್ಲಿ, 2021ರ ಏಪ್ರಿಲ್ 1 ರಿಂದ 2022ರ ಮಾರ್ಚ್ 31ರ ಅವಧಿಯಲ್ಲಿ, ಒಆರ್‌ಬಿಐಒ (ಆರ್‌ಬಿಐ ಓಂಬುಡ್ಸ್‌ಮನ್ ಕಚೇರಿಗಳು) ಮತ್ತು ಸಿಆರ್‌ಪಿಸಿ (ಕೇಂದ್ರೀಕೃತ ರಶೀದಿ ಮತ್ತು ಸಂಸ್ಕರಣಾ ಕೇಂದ್ರ)ಗಳಲ್ಲಿ ಸ್ವೀಕರಿಸಿದ ಒಟ್ಟು ದೂರುಗಳು 4,18,184 ರಷ್ಟಿವೆ. ಇದು ಕಳೆದ ವರ್ಷಕ್ಕಿಂತ ಶೇ. 9.39ರಷ್ಟು ಹೆಚ್ಚಳವಾಗಿದೆ' ಎಂದು ಆರ್‌ಬಿಐ ಬುಧವಾರ ಬಿಡುಗಡೆ ಮಾಡಿದ 2021–22ರ ಒಂಬುಡ್ಸ್‌ಮನ್ ಯೋಜನೆಗಳ ವಾರ್ಷಿಕ ವರದಿ ಹೇಳಿದೆ. ಎಟಿಎಂ/ಡೆಬಿಟ್ ಕಾರ್ಡ್‌ಗಳಿಗೆ ಸಂಬಂಧಿಸಿದ ದೂರುಗಳ ಪಾಲು ಒಟ್ಟು ಶೇ.14.65 ರಷ್ಟಿದ್ದು, ಮೊಬೈಲ್/ಎಲೆಕ್ಟ್ರಾನಿಕ್ ಬ್ಯಾಂಕಿಂಗ್‌ಗೆ ಸಂಬಂಧಿಸಿದ ದೂರುಗಳು ಶೇ. 13.64ರಷ್ಟಿವೆ ಎಂದು ವರದಿ ತಿಳಿಸಿದೆ.

2 ಶೇ.7ರಷ್ಟು ಜಿಡಿಪಿ ಬೆಳವಣಿಗೆ ಅಂದಾಜು
4 ಎಮ್.ಸಿ.ಸಿ. ಬ್ಯಾಂಕಿನ ಎನ್‌ಆರ್‌ಐ ಸಮಾವೇಶ
7 ನಿಮ್ಮ ಪ್ರಶ್ನೆ ನಮ್ಮ ಉತ್ತರ

## ಅತ್ಮೀಯ ಸಹಕಾರಿಗಳೇ...



### ಸಿರಿಧಾನ್ಯ ಸೇವಿಸುವವನು ನಿರೋಗಿ ಎಂದೆನಿಸುವನು

ಸಿರಿಧಾನ್ಯದ ಮಹತ್ವ ಕುರಿತಂತೆ ಇದೇ ಅಂಕಣದಲ್ಲಿ ನಾನು ಹಿಂದೆ ಹಲವು ಬಾರಿ ಬರೆದಿರುವುದನ್ನು ನಿಮಗೆ ನೆನಪಿರಬಹುದು. ಈಗ ಮತ್ತೊಮ್ಮೆ ಸಿರಿಧಾನ್ಯವನ್ನು ಕುರಿತು ಬರೆಯುವುದಕ್ಕೆ ಕಾರಣವಿದೆ. 2017–18ರಲ್ಲಿ ನಮ್ಮ ಸರ್ಕಾರದ ಆಡಳಿತದ ಸಂದರ್ಭದಲ್ಲಿ, ಕೃಷಿ ಸಚಿವರಾಗಿದ್ದ ಕೃಷ್ಣ ಬೈರೇಗೌಡರು ಮೊದಲ ಬಾರಿಗೆ ಸಂಪುಟ ಸಭೆಯಲ್ಲಿ ಸಿರಿಧಾನ್ಯದ ಮಹತ್ವದ ಬಗ್ಗೆ ಪ್ರಸ್ತಾಪಿಸಿದ್ದರು. ಅಂದೇ ಮುಂದಿನ ದಿನಗಳಲ್ಲಿ ಸಿರಿಧಾನ್ಯ ಎಲ್ಲೆಡೆ ಜನಪ್ರಿಯವಾಗಲಿದೆ ಎಂದೆನಿಸಿದ್ದು; ಈಗ ನಿಜವಾಗಿದೆ. ವಿಶ್ವಸಂಸ್ಥೆಯ ಆಹಾರ ಮತ್ತು ಕೃಷಿ ಒಕ್ಕೂಟ 2023ಅನ್ನು ಅಂತರರಾಷ್ಟ್ರೀಯ ಸಿರಿಧಾನ್ಯಗಳ ವರ್ಷವಾಗಿ ಆಚರಿಸುವುದಾಗಿ ಘೋಷಿಸಿದೆ.

ಕರ್ನಾಟಕಕ್ಕೆ ಸೀಮಿತವಾಗಿದ್ದ ಸಿರಿಧಾನ್ಯಗಳ ಚಟುವಟಿಕೆಯನ್ನು ಹೊರ ರಾಜ್ಯಗಳು ಮತ್ತು ಹೊರ ದೇಶಗಳಿಗೆ ವಿಸ್ತರಿಸುವ ಕೆಲಸ ನಂತರದ ದಿನಗಳಲ್ಲಿ ನಡೆಯಿತು. ರಾಷ್ಟ್ರಮಟ್ಟದ ಮತ್ತು ಜಾಗತಿಕ ಸಿರಿಧಾನ್ಯಗಳ ಮೇಳವನ್ನೂ2018ರಲ್ಲೇ ಬೆಂಗಳೂರಿನಲ್ಲಿ ಆಯೋಜಿಸಲಾಗಿತ್ತು. ಮೇಳಕ್ಕೆ ವಿಶ್ವದ ಹಲವು ದೇಶಗಳ ವಿಜ್ಞಾನಿಗಳನ್ನು, ವಿದೇಶಿ ಕಂಪನಿಗಳ ಪ್ರತಿನಿಧಿಗಳನ್ನೂ ಆಹ್ವಾನಿಸಲಾಗಿತ್ತು. ಅದು ಈಗ ಫಲ ನೀಡಿದೆ. ನಮ್ಮ ಆಹಾರ ಸಂಸ್ಕೃತಿಗೆ ಸಾವಿರಾರು ವರ್ಷಗಳ ಇತಿಹಾಸವಿದೆ. ನಮ್ಮದೇ ಆದ ಕೃಷಿ, ಸಂಪ್ರದಾಯವಿದೆ. ಹಿಂದೆ ನಮ್ಮ ರಾಜ್ಯದ ಕರಾವಳಿ–ಮಲೆನಾಡು, ಹಳೆ ಮೈಸೂರು, ಬಯಲು ಸೀಮೆ, ಮುಂಬೈ ಕರ್ನಾಟಕ ಹಾಗೂ ಹೈದರಾಬಾದ್ ಕರ್ನಾಟಕ ಭಾಗದ ಜನರು ತಮ್ಮದೇ ಆದ ಸಂಪ್ರಾದಾಯಿಕ ಸ್ಥಳಿಯ ಬೆಳೆಗಳನ್ನು ಬೆಳೆಯುತ್ತಿದ್ದರು. ಅದು ಅವರ ನಿತ್ಯ ಆಹಾರದ ಭಾಗವಾಗಿತ್ತು. ಜನರು ಆರೋಗ್ಯವಂತರಾಗಿಯೂ, ದೃಢಕಾಯರಾಗಿಯೂ ಇರುತ್ತಿದ್ದರು. ಸಿರಿಧಾನ್ಯಗಳ ಕುರಿತಂತೆ ಸರ್ವಜ್ಞ ಅಂದೇ ತನ್ನ ವಚನದಲ್ಲಿ ಹೇಳಿದ್ದಾನೆ.

ನವಣೆಯನು ತಿಂಬುವನು
ಹವಣಾಗಿ ಇರುತಿಹನು ಬವಣಿಗಳಾಗವನು ಒಳಬೀಳನೀ
ಮಾತು ತವಣೆಲ್ಲೆಂದ ಸರ್ವಜ್ಞ
ರಾಗಿಯನ್ನು ಉಂಬುವ ನಿರೋಗಿ ಎಂದೆನಿಸುವನು
ರಾಗಿಯು ಭೋಗಿಗಳಿಗಲ್ಲ ಬಡವರಿಂಗಾಗಿ
ಬೆಳೆದಿಹುದು ಸರ್ವಜ್ಞ

ಈ ಸಿರಿಧಾನ್ಯಗಳ ವಿಶೇಷತೆ ಅಂದರೆ ಅದು ಉತ್ಕೃಷ್ಟ ಆಹಾರವಾಗಿದ್ದು, ಭಾರತ ಹಾಗೂ ಆಫ್ರಿಕಾ ರಾಷ್ಟ್ರಗಳ ದೇಶೀ ಬೆಳೆಗಳಾಗಿವೆ. ಭಾರತದಲ್ಲಿ ಸಿರಿಧಾನ್ಯಗಳನ್ನು ಅನಾದಿ ಕಾಲದಿಂದಲೂ ಬೆಳೆಯಲಾಗುತ್ತಿದೆ. ಭತ್ತಕ್ಕೆ ಹೋಲಿಸಿದರೆ ಸಿರಿಧಾನ್ಯ ಬೆಳೆಸಲು ಶೇ. 70ರಷ್ಟು ಕಡಿಮೆ ನೀರಿನ ಅವಶ್ಯವಿದೆ. ಕೀಟನಾಶಕಗಳು, ರಾಸಾಯನಿಕ ಗೊಬ್ಬರಗಳ ಅಗತ್ಯವಿಲ್ಲ. ಹೀಗಾಗಿ ಇವು ಸಂಪೂರ್ಣ ಸಾವಯವ ಹಾಗೂ ಪರಿಸರ ಸ್ನೇಹಿ. ಕಡಿಮೆ ಉತ್ಪಾದನಾ ವೆಚ್ಚ ಮತ್ತು ಉತ್ತಮ ಇಳುವರಿ ಹಾಗೂ ಕಡಿಮೆ ಫಲವತ್ತತೆಯ ಭೂಮಿಯಲ್ಲೂ ಇವು ಬೆಳೆಯಬಲ್ಲವು.

ನಾವು ಆರೋಗ್ಯವಂತರಾಗಿ ಬದುಕಬೇಕು ಎಂಬ ಕಾಳಜಿಯಿಂದ ಸಿರಿಧಾನ್ಯಗಳ ಕಡೆ ಜನ ಮುಖಮಾಡಿರುವ ಅನೇಕರಿಗೆ ಮಧುಮೇಹ, ಗ್ಯಾಸ್ಟ್ರಿಕ್, ಬೊಜ್ಜಿನ ಸಮಸ್ಯೆಗಳಿಗೆ ಪರಿಹಾರ ಸಿಕ್ಕಿದೆ ಎಂದು ಹೇಳುವುದನ್ನು ನಾನು ಕೇಳಿದ್ದೇನೆ. ಸಿರಿಧಾನ್ಯಗಳಿಗೆ ಜಾಗತಿಕ ಮಟ್ಟದಲ್ಲಿ ಮಾರುಕಟ್ಟೆ ಕಂಡುಕೊಳ್ಳಲು ರಾಜ್ಯ ಸರ್ಕಾರ ಕೂಡಲೇ ಒಂದು ಕ್ರಿಯಾ ಯೋಜನೆಯೊಂದನ್ನು ರೂಪಿಸಿ, ಅದರ ಪ್ರತಿಫಲ ನಮ್ಮ ರಾಜ್ಯದ ರೈತರಿಗೆ ಸಿಗುವಂತೆ ಮಾಡಬೇಕಿದೆ. ದೊರೆಕಿರುವ ಅವಕಾಶ ಕೈ ಜಾರದಂತೆ ನೋಡಿಕೊಳ್ಳಬೇಕಿದೆ ಎಂದು ಹೇಳಬಯಸುತ್ತೇನೆ.

▸▸ ಎಚ್.ಕೆ. ಪಾಟೀಲ
ಅಧ್ಯಕ್ಷರು

## ಶೇ.7ರಷ್ಟು ಜಿಡಿಪಿ ಬೆಳವಣಿಗೆ ಅಂದಾಜು




**ಹೊಸದಿಲ್ಲಿ :** ಭಾರತದ ಆರ್ಥಿಕತೆ ಪ್ರಸಕ್ತ ಆರ್ಥಿಕ ವರ್ಷದಲ್ಲಿ ಶೇ.7ರಷ್ಟು ಬೆಳವಣಿಗೆ ಹೊಂದಬಹುದು ಎಂದು ರಾಷ್ಟ್ರೀಯ ಸಾಂಖ್ಯಿಕ ಕಚೇರಿ (ಎನ್‌ಎಸ್‌ಓ) ಬಿಡುಗಡೆ ಮಾಡಿರುವ ತನ್ನ ಪ್ರಥಮ ಮುಂಗಡ ಅಂದಾಜಿನಲ್ಲಿ ತಿಳಿಸಿದೆ. 2022ರ ಮಾರ್ಚ್ 31ಕ್ಕೆ ಕೊನೆಗೊಂಡ ಹಿಂದಿನ ಆರ್ಥಿಕ ವರ್ಷದಲ್ಲಿ ಭಾರತದ ಜಿಡಿಪಿ ಶೇ.8.7ರಷ್ಟು ಬೆಳವಣಿಗೆ ಹೊಂದಿತ್ತು. ಕಳೆದ ತಿಂಗಳು ಭಾರತೀಯ ರಿಸರ್ವ್ ಬ್ಯಾಂಕ್ ದೇಶದ ನಿವ್ವಳ ದೇಶೀಯ ಉತ್ಪನ್ನದ ಬೆಳವಣಿಗೆ ಶೇ.6.8ರಷ್ಟು ಆಗಲಿದೆ ಎಂದು ಅಂದಾಜಿಸಿತ್ತು. ಪ್ರಸಕ್ತ ಜಾಗತಿಕ ಆರ್ಥಿಕ ಬಿಕ್ಕಟ್ಟಿನ ಹೊರತಾಗಿಯೂ ಸದ್ಯ ಶೇ.7ರಷ್ಟು ಬೆಳವಣಿಗೆ ಹೊಂದಲಾಗಿದೆ ಎಂದು ತಿಳಿಸಿತ್ತು.

ಆರ್‌ಬಿಐ ನೈಜ ಜಿಡಿಪಿ ಬೆಳವಣಿಗೆ ಸದ್ಯ 6.8ರಷ್ಟಿದ್ದು, ಮೂರನೇ ತ್ರೈಮಾಸಿಕದಲ್ಲಿ ಶೇ.4.4ರಷ್ಟಿದ್ದು, ನಾಲ್ಕನೇ ತ್ರೈಮಾಸಿಕದಲ್ಲಿ ಶೇ.4.2ರಷ್ಟು ಆಗಲಿದೆ ಎಂದು ಅಂದಾಜಿಸಿದೆ. ಪ್ರಸಕ್ತ ಹಣಕಾಸು ವರ್ಷದ ಅಂತ್ಯಕ್ಕೆ ದೇಶದಲ್ಲಿ ಹೂಡಿಕೆ ಪ್ರಮಾಣ ಶೇ.11.5ರಷ್ಟು ಬೆಳವಣಿಗೆ ಸಾಧಿಸಲಿದ್ದು, ಬೇಡಿಕೆ ಪ್ರಮಾಣ ಶೇ.7.7ರಷ್ಟು ಇರಲಿದೆ ಎಂದು ಹೇಳಿತ್ತು. ಜಿಡಿಪಿಯಲ್ಲಿ ಗ್ರಾಹಕರ ಬಳಕೆಯ ಪ್ರಮಾಣವು ಶೇ.57.2ತಲುಪಲಿದೆ ಎಂದು ನಿರೀಕ್ಷಿಸಲಾಗಿದ್ದು, ಕಳೆದ ವರ್ಷ ಶೇ.56.9ರಷ್ಟಿತ್ತು. ಇದರ ಆಧಾರದಲ್ಲಿ ಪ್ರಸಕ್ತ ದೇಶದ ಪ್ರತಿ ವ್ಯಕ್ತಿಯ ತಲಾದಾಯದಿಂದ ರಾಷ್ಟ್ರೀಯ ಆದಾಯ 1,11,807 ಕೋಟಿ ರೂ.ಗಳು ಆಗಬಹುದೆಂದು ಅಂದಾಜಿಸಲಾಗಿದೆ. ಇದು 2021–22ರಲ್ಲಿ 1,05,955 ಕೋಟಿ ರೂ. ಹಾಗೂ 2020–21ನೇ ಸಾಲಿನಲ್ಲಿ 98,629 ಕೋಟಿ ರೂ.ಗಳಷ್ಟಿತ್ತು.

ಆರ್‌ಬಿಐ 2022ರ ಏಪ್ರಿಲ್‌ನಲ್ಲಿ ದೇಶದ ಜಿಡಿಪಿ ಬೆಳವಣಿಗೆ ದರ ಶೇ.7.8ರಿಂದ ಶೇ.7.2ಕ್ಕೆ ಕುಸಿತಗೊಳ್ಳಲಿದೆ ಎಂದು ಅಂದಾಜು ಮಾಡಿತ್ತು. ನಂತರ ಶೇ.7ರಷ್ಟು ಆಗಲಿದೆ ಎಂದು ಕಳೆದ ಸೆಪ್ಟೆಂಬರ್‌ನಲ್ಲಿ ಮರುಅಂದಾಜು ಮಾಡಿತ್ತು. ಆದರೆ ಎರಡನೇ ತ್ರೈಮಾಸಿಕ ಅವಧಿಯಲ್ಲಿ ಜಿಡಿಪಿ ಬೆಳವಣಿಗೆ ದರ ಹಿಂದಿನ ಮೂರು ತಿಂಗಳಿನಲ್ಲಿದ್ದ ಶೇ.13.5 ರಿಂದ ಶೇ.6.3ಕುಸಿತ ಕಂಡಿತ್ತು. ಇದು ಎಚ್ಚರಿಕೆ ಗಂಟೆ ಎಂದೇ ಪರಿಗಣಿಸಲಾಗಿತ್ತು.

# ಎಸ್‌ಬಿಐ ಕ್ರೆಡಿಟ್ ಕಾರ್ಡ್ ಬಳಕೆದಾರರೇ ಎಚ್ಚರಿಕೆ ಸೈಬರ್ ಚೋರರಿಂದ ವಂಚನೆ, ತಪ್ಪಿಸಿಕೊಳ್ಳುವ ಮಾರ್ಗ

**ಬೆಂಗಳೂರು :** ಆಧುನಿಕತೆ ಹೆಚ್ಚಾದಂತೆ ತಂತ್ರಜ್ಞಾನ ಆಧಾರಿತ ಅಪರಾಧ, ವಂಚನೆ ಪ್ರಕರಣಗಳ ಸಂಖ್ಯೆಗಳು ಹೆಚ್ಚಾಗುತ್ತಿವೆ. ಡಿಜಿಟಲ್ ಅಕೌಂಟ್ ಖಾತೆಗಳು ಹ್ಯಾಕ್ ಆಗುತ್ತಿದ್ದು, ಜನರು ಲಕ್ಷಾಂತರ ರೂಪಾಯಿ ಕಳೆದುಕೊಳ್ಳುತ್ತಿದ್ದಾರೆ. ಅದರಲ್ಲೂ ದೇಶದ ಅತಿ ದೊಡ್ಡ ಬ್ಯಾಂಕ್ ಭಾರತೀಯ ಸ್ಟೇಟ್ ಬ್ಯಾಂಕ್ ಹೆಸರಿನಲ್ಲೂ ಸೈಬರ್ ಚೋರರು ಜನರಿಗೆ ವಂಚಿಸುತ್ತಿದ್ದಾರೆ.

ಎಸ್‌ಬಿಐ ಕ್ರೆಡಿಟ್ ಕಾರ್ಡ್ ಸರ್ವೀಸಸ್ (ಮೊಬೈಲ್ ನಂ–9091970642) ಎಂಬ ವಂಚಕ ಜಾಲವೊಂದು ಸಾಮಾಜಿಕ ಜಾಲತಾಣಗಳಲ್ಲಿ ಸಕ್ರಿಯವಾಗಿದ್ದು, ಈ ಬ್ಯಾಂಕಿನ ಕ್ರೆಡಿಟ್ ಕಾರ್ಡ್ ಹೊಂದಿರುವ ಗ್ರಾಹಕರನ್ನು ಸುಲಭವಾಗಿ ವಂಚಿಸುತ್ತಿದೆ. ವಾಟ್ಸಾಪ್, ಫೇಸ್ ಬುಕ್ ಮತ್ತಿತರ ಕಡೆಗಳಲ್ಲಿ ಇದೇ ರೀತಿಯ ಬೋರ್ಡ್ ತಗುಲಿ ಹಾಕಿಕೊಂಡಿರುವ ಚೋರರು, ಜನರನ್ನು ಕ್ಷಣಮಾತ್ರದಲ್ಲಿ ಮರಳು ಮಾಡಿ ವಂಚಿಸುತ್ತಿದೆ.

**ವಂಚಕರ ಕುತಂತ್ರ :** ಈ ವಂಚಕರು ಇದಕ್ಕಿದ್ದಂತೆ ಕ್ರೆಡಿಟ್ ಕಾರ್ಡ್ ಗ್ರಾಹಕರಿಗೆ ಕರೆ ಮಾಡಿ, ನಯವಾಗಿ ಕಾರ್ಡಿನ ಬಗ್ಗೆ ಮಾಹಿತಿ ಪಡೆಯುತ್ತಾರೆ. ಒಂದು ವೇಳೆ ಕಾರ್ಡ್ ಹೊಂದಿದ್ದು, ಅದರಿಂದ ಯಾವುದೇ ವ್ಯವಹಾರ ಮಾಡದಿದ್ದಲ್ಲಿ ಸಂಪೂರ್ಣವಾಗಿ ಕಾರ್ಡ್ ಬ್ಲಾಕ್ ಮಾಡಿಸುವುದಾಗಿ ಹೇಳುತ್ತಾರೆ. ಒಂದು ವೇಳೆ ಕಾರ್ಡ್ ಬ್ಲಾಕ್ ಮಾಡಿ ಅಂತಾ ಹೇಳಿದ್ರೆ ಸಾಕು, ಕ್ರೆಡಿಟ್ ಕಾರ್ಡ್, ಆಧಾರ್ ಕಾರ್ಡ್, ಪ್ಯಾನ್ ನಂಬರ್ ಮಾಹಿತಿ ಕೇಳುತ್ತಾರೆ. ನಾವು ಮೈ ಮರೆತು ಎಲ್ಲಾ ಮಾಹಿತಿ ನೀಡಿದರೆ ಮುಗೀತು ಒಂದೊಂದಾಗಿಯೇ ಅಕೌಂಟ್‌ನ ಎಲ್ಲಾ ಮಾಹಿತಿಯನ್ನು ಬದಲಾವಣೆ ಮಾಡುತ್ತಾ ಹೋಗುತ್ತಾರೆ. ನಾವು ಒಟಿಪಿ (ಒನ್ ಟೈಂ ಪಾಸ್ ವರ್ಡ್) ಹೇಳುತ್ತಾ ಹೋದಂತೆ, ಅಕೌಂಟ್ ಸಂಪರ್ಕದ ನಂಬರ್, ವಿಳಾಸ ಬದಲಾಯಿಸಿ, ಸುಲಭವಾಗಿ ಅವರ ಮೊಬೈಲ್ ನಿಂದ ನಮ್ಮ ಬ್ಯಾಂಕ್ ಆಕೌಂಟ್ ಪ್ರವೇಶಿಸುತ್ತಾರೆ. ಆಗ ಸೈಬರ್ ಪೊಲೀಸರಿಗೆ ದೂರು ನೀಡಿದ್ರೂ ಯಾವುದೇ ಪ್ರಯೋಜನವಾಗಲ್ಲ.




**ತಪ್ಪಿಸಿಕೊಳ್ಳುವ ಮಾರ್ಗ :** ಡಿಜಿಟಲ್ ಅಕೌಂಟ್ ಹ್ಯಾಕ್ ಆಗುತ್ತಿದ್ದಂತೆ ನಿಮ್ಮ ಮೊಬೈಲ್ ಗೆ ಮೇಸೆಜ್ ಹಾಗೂ ಇ–ಮೇಲ್ ವಿಳಾಸಕ್ಕೆ ಮೇಲ್ ಬರುತ್ತಿರುತ್ತದೆ. ಅದನ್ನು ಕಡ್ಡಾಯವಾಗಿ ನೋಡಿಕೊಳ್ಳಬೇಕು, ಇಲ್ಲವಾದರೆ ಸುಲಭವಾಗಿ ವಂಚಕರ ಕುತಂತ್ರಕ್ಕೆ ಬಲಿಪಶುವಾಗುತ್ತೀರಾ. ಅದರಲ್ಲೂ ಮುಖ್ಯವಾಗಿ ಒಟಿಪಿಯನ್ನು ಯಾವುದೇ ಕಾರಣಕ್ಕೂ ಅನಾಮಿಕರೊಂದಿಗೆ ಹಂಚಿಕೊಳ್ಳಬಾರದು. ಒಂದು ವೇಳೆ ಹ್ಯಾಕ್ ಆದರೂ ತಕ್ಷಣ ಕೆಡ್ರಿಟ್ ಕಾರ್ಡ್ ಹಿಂಬಾಗದಲ್ಲಿನ ಟೋಲ್ ಫ್ರೀ ನಂಬರ್‌ಗೆ ಕರೆ ಮಾಡುವ ಮೂಲಕ ಕಾರ್ಡ್ ಬ್ಲಾಕ್ ಮಾಡಿಸಬೇಕು. ಒಂದು ಬಾರಿ ಕಾರ್ಡ್ ಬ್ಲಾಕ್ ಆಗುತ್ತಿದ್ದಂತೆ ಚೋರರು ಏನೇ ಮಾಡಿದರೂ ಹಣ ದೋಚಲು ಸಾಧ್ಯವಿರುವುದಿಲ್ಲ. ಇಲ್ಲವಾದರೆ ಬೆಂಗಳೂರಿನ ಎಂಜಿ ರಸ್ತೆಯಲ್ಲಿರುವ ಅಧಿಕೃತ ಎಸ್‌ಬಿಟಿ ಕ್ರೆಡಿಟ್ ಸರ್ವಿಸ್ ಸೆಂಟರ್ ಸಂಪರ್ಕಿಸಿ ಕಾರ್ಡ್‌ನ್ನು ತಾತ್ಕಾಲಿಕವಾಗಿ ಅಥವಾ ಸಂಪೂರ್ಣವಾಗಿ ಬಂದ್ ಮಾಡಿಸಬಹುದು

**ಎಸ್‌ಬಿಐ ಕ್ರೆಡಿಟ್ ಕಾರ್ಡ್ ಬಗೆಗಿನ ಸಂಪೂರ್ಣ ಮಾಹಿತಿಗೆ :** ಎಂಬೆಸ್ಸಿ ಹೈಟ್ಸ್, ಎ ಬ್ಲಾಕ್, 10ನೇ ಮಹಡಿ, ಮ್ಯಾಗ್ರತ್ ರಸ್ತೆ, ಅಶೋಕ ನಗರ, ಬೆಂಗಳೂರು–560025 ಸಂಪರ್ಕಿಸಬಹುದು.

## ಕೆವೈಸಿ ಬದಲಿಸಲು ಬ್ಯಾಂಕ್‌ಗೆ ಹೋಗಬೇಕಿಲ್ಲ : ಆರ್‌ಬಿಐ ಸ್ಪಷ್ಟನೆ

**ಹೊಸದಿಲ್ಲಿ :** ಬ್ಯಾಂಕ್ ಖಾತೆದಾರರು ತಮ್ಮ ಕೆವೈಸಿ ಅಪ್‌ಡೇಟ್ ಮಾಡಲು ಅಥವಾ ವಿಳಾಸ ಬದಲಿಸಲು ಬ್ಯಾಂಕ್‌ಗಳಿಗೆ ಭೇಟಿ ನೀಡುವ ಅಗತ್ಯವಿಲ್ಲ ಎಂದು ಭಾರತೀಯ ರಿಸರ್ವ್ ಬ್ಯಾಂಕ್ ಸ್ಪಷ್ಟಪಡಿಸಿದೆ. ಈಗಾಗಲೇ ಅಗತ್ಯ ದಾಖಲಾತಿಗಳನ್ನು ಸಲ್ಲಿಸಿರುವ ಗ್ರಾಹಕರು ಬದಲಾದ ತಮ್ಮ ವೈಯಕ್ತಿಕ ಮಾಹಿತಿಯನ್ನು ಅಪ್‌ಡೇಟ್ ಮಾಡಲು ಬ್ಯಾಂಕ್‌ಗಳಿಗೆ ಹೋಗಲೇಬೇಕೆಂಬ ನಿಯಮವಿಲ್ಲ ಎಂದು ಹೇಳಿದೆ.

ಬ್ಯಾಂಕುಗಳು ತನ್ನ ಗ್ರಾಹಕರಿಗೆ ಕೆವೈಸಿ ದೃಢೀಕರಿಸಲು ಬ್ಯಾಂಕಿನ ಶಾಖೆಗೆ ಖುದ್ದಾಗಿ ಬರುವಂತೆ ಒತ್ತಾಯಿಸಕೂಡದು ಎಂದು ಆರ್‌ಬಿಐ ಹೊರಡಿಸಿರುವ ಮಾರ್ಗದರ್ಶಿಯಲ್ಲಿ ತಿಳಿಸಿದೆ. "ನೂತನ ಮಾರ್ಗದರ್ಶಿ ಸೂತ್ರಗಳ ಅನ್ವಯ, ಒಂದು ವೇಳೆ ಕೆವೈಸಿಯಲ್ಲಿ ಯಾವುದೇ ಬದಲಾವಣೆ ಇಲ್ಲ ಎಂದಾದಲ್ಲಿ ಸ್ವ–ದೃಢೀಕರಣ ಪತ್ರವನ್ನು ಸಲ್ಲಿಸಿ ಕೆವೈಎಸ್ ಮರು ಸಂದಾಯ ಪ್ರಕ್ರಿಯೆಯನ್ನು ಪೂರ್ಣಗೊಳಿಸಬಹುದು. ಇ–ಮೇಲ್, ನೋಂದಾಯಿತ ಮೊಬೈಲ್ ಸಂಖ್ಯೆ, ಎಟಿಎಂಗಳ ಮೂಲಕವೂ ಈ ಪ್ರಕ್ರಿಯೆ ಮಾಡಬಹುದಾಗಿದೆ. ಆದರೆ ಮನಿ ಲಾಂಡರಿಂಗ್ ಕಾಯಿದೆಗೆ (ಪಿಎಂಎಲ್‌ಎ) ಅನುಗುಣವಾಗಿ ಕೆವೈಸಿ ಅಪ್‌ಡೇಟ್ ಮಾಡಲೇಬೇಕಾಗುತ್ತದೆ," ಎಂದೂ ಆರ್‌ಬಿಐ ಸೂಚಿಸಿದೆ. ಒಂದು ವೇಳೆ ಕೇವಲ ವಿಳಾಸ ಬದಲಾವಣೆ ಇದ್ದಲ್ಲಿ, ಗ್ರಾಹಕರು ತಮ್ಮ ಇಚ್ಛಾನುಸಾರ ದಾಖಲಾತಿಗಳನ್ನು ಸಂಬಂಧಪಟ್ಟ ಶಾಖೆಗೆ ರವಾನಿಸಬಹುದು. ಇದನ್ನು ಬ್ಯಾಂಕುಗಳು ಮುಂದಿನ ಎರಡು ತಿಂಗಳ ಒಳಗಾಗಿ ದೃಢೀಕರಿಸಿಕೊಳ್ಳಬೇಕು. ಬ್ಯಾಂಕುಗಳ ಕಾಲಕಾಲಕ್ಕೆ ತನ್ನ ಗ್ರಾಹಕರು ದಾಖಲಾತಿಗಳನ್ನು ಅಪ್‌ಡೇಟ್ ಮಾಡಿಕೊಳ್ಳುವುದು ಕಡ್ಡಾಯವಾಗಿದೆ. ಪಾಸ್‌ಪೋರ್ಟ್, ಡ್ರೈವಿಂಗ್ ಲೈಸೆನ್ಸ್, ಆಧಾರ್ ಸಂಖ್ಯೆ, ಮತದಾರರ ಗುರುತಿನ ಚೀಟಿ, ನರೇಗಾ ಜಾಬ್ ಕಾರ್ಡ್ ಹಾಗೂ ರಾಷ್ಟ್ರೀಯ ಜನಸಂಖ್ಯಾ ನೋಂದಣಿ ನೀಡಿದ ಪತ್ರಗಳನ್ನು ಆಧರಿಸಿ ಕೆವೈಸಿ ಪೂರ್ಣಗೊಳಿಸುವ ಪ್ರಕ್ರಿಯೆ ನಡೆಸಬೇಕು ಎಂದು ಕೇಂದ್ರೀಯ ಬ್ಯಾಂಕ್ ಸೂಚಿಸಿದೆ.

## ಎಮ್.ಸಿ.ಸಿ. ಬ್ಯಾಂಕಿನ ಎನ್ಆರ್ಐ ಸಮಾವೇಶ




**ಮಂಗಳೂರು :** ಎಮ್.ಸಿ.ಸಿ. ಬ್ಯಾಂಕಿನ ಶತಮಾನೋತ್ತರ ದಶಮಾನೋತ್ಸವದ ಅಂಗವಾಗಿ ಅನಿವಾಸಿ ಭಾರತೀಯ ಗ್ರಾಹಕರ ಸಮಾವೇಶ (ಎನ್ಆರ್ಐ ಮೀಟ್)ವನ್ನು ಡಿಸೆಂಬರ್ 30ರ ಶುಕ್ರವಾರದಂದು, ಮಂಗಳೂರಿನ ಓಶಿಯನ್ ಪರ್ಲ್ ಹೋಟೆಲಿನಲ್ಲಿ ಆಯೋಜಿಸಲಾಗಿತ್ತು. ಎಮ್.ಸಿ.ಸಿ. ಬ್ಯಾಂಕಿನ ಅಧ್ಯಕ್ಷರಾದ ಅನಿಲ್ ಲೋಬೊ ಸಮಾವೇಶದ ಅಧ್ಯಕ್ಷತೆಯನ್ನು ವಹಿಸಿದ್ದರು.

ಸೈಂಟ್ ಆನ್ಸ್ ಫ್ರಾಯರಿ, ಮಂಗಳೂರು ಇದರ ಸುಪೀರಿಯರ್ ವಂದನೀಯ ಡಾ। ರೊಕಿ ಡಿಕುನ್ಹಾ ದೀಪ ಬೆಳಗಿಸಿ ಸಮಾವೇಶವನ್ನು ಉದ್ಘಾಟಿಸಿದರು. ಅನಿವಾಸಿ ಉದ್ಯಮಿ ಹಾಗೂ ಕೊಡುಗೈ ದಾನಿ, ಡಾ। ರೊನಾಲ್ಡ್ ಕುಲಾಸೊ, ಸಂಸ್ಥಾಪಕ ಹಾಗೂ ಮ್ಯಾನೆಜಿಂಗ್ ಡೈರಕ್ಟರ್, ದಾಯ್ಜಿವರ್ಲ್ಡ್ ಮೀಡಿಯ ಪ್ರೈವೆಟ್ ಲಿಮಿಟೆಡ್, ಮಂಗಳೂರು, ವಾಲ್ಟರ್ ನಂದಳಿಕೆ, ಚಾರ್ಟರ್ಡ್ ಅಕೌಂಟೆಂಟ್ ರುಡೊಲ್ಫ್ ರೊಡ್ರಿಗಸ್ ಮುಖ್ಯ ಅತಿಥಿಗಳಾಗಿದ್ದರು. ಈ ಸಂದರ್ಭದಲ್ಲಿ ಬ್ಯಾಂಕಿಗೆ ಎನ್ಅರ್ಐ ಸೌಲಭ್ಯ ಸಿಕ್ಕಿದ ದಿನದಿಂದ ಬ್ಯಾಂಕಿನಲ್ಲಿ ಗ್ರಾಹಕರಾಗಿ ಮುಂದುವರಿಯುತ್ತಿರುವ ಅನಿವಾಸಿ ಭಾರತಿಯರನ್ನು ಸನ್ಮಾನಿಸಲಾಯಿತು. ಉಪಾಧ್ಯಕ್ಷ ಜೆರಾಲ್ಡ್ ಜೂಡ್ ಡಿಸಿಲ್ವಾ, ನಿರ್ದೇಶಕರಾದ ಮಾರ್ಸೆಲ್ ಡಿಸೋಜ, ಡೇವಿಡ್ ಡಿಸೋಜ, ಹೆರಾಲ್ಡ್ ಮೊಂತೇರೊ, ಅಂಡ್ರ್ಯು ಡಿಸೋಜ, ರೋಶನ್ ಡಿಸೋಜ, ಐರಿನ್ ರೆಬೆಲ್ಲೊ, ಡಾ। ಫ್ರಿಡಾ ಡಿಸೋಜ, ಎಲ್ರೊಯ್ ಕಿರಣ್ ಕಾಸ್ಟೊ, ಸಿ.ಜಿ. ಪಿಂಟೊ, ಸುಶಾಂತ್ ಸಲ್ಡಾನ್ಹಾ, ಶರ್ಮಿಳಾ ಮಿನೇಜಸ್, ಆಲ್ವಿನ್ ಮೊಂತೇರೊ, ಫೆಲಿಕ್ಸ್ ಡಿಕ್ರುಜ್, ಉಪ ಮಹಾಪ್ರಬಂಧಕ ರಾಜ್ ಮಿನೇಜಸ್, ಹಿರಿಯ ಪ್ರಬಂಧಕರ (ಎನ್ಆರ್ಐ) ಡೆರಿಲ್ ಲಸ್ರಾದೊ, ಮತ್ತಿತರರು ಹಾಜರಿದ್ದರು. ವ್ಯವಸ್ಥಾಪನ ಸಮಿತಿಯ ಅಧ್ಯಕ್ಷ ಅನಿಲ್ ಪತ್ರಾವೊ ಸ್ವಾಗತಿಸಿ, ಮಹಾಪ್ರಬಂಧಕ ಸುನಿಲ್ ಮಿನೇಜಸ್ ವಂದಿಸಿದರು. ರೋಶನ್ ಡಿಸಿಲ್ವಾ ನಿರೂಪಿಸಿದರು.

## ಶಿವಮೊಗ್ಗ ಅರೆಕಾನಟ್ ಮಂಡಿ ಮರ್ಚೆಂಟ್ಸ್ ಕೋ-ಆಪರೇಟಿವ್ ಬ್ಯಾಂಕ್ : 2023ನೇ ವರ್ಷದ ಕ್ಯಾಲೆಂಡರ್ ಬಿಡುಗಡೆ



ದಿ ಶಿವಮೊಗ್ಗ ಅರೆಕಾನಟ್ ಮಂಡಿ ಮರ್ಚೆಂಟ್ಸ್ ಕೋ-ಆಪರೇಟಿವ್ ಬ್ಯಾಂಕ್ ಲಿ., ಶಿವಮೊಗ್ಗ ಇದರ 2023 ವರ್ಷದ ಕ್ಯಾಲೆಂಡರ್‌ನ್ನು ಬಿಡುಗಡೆಗೊಳಿಸಲಾಯಿತು. ಈ ಸಂದರ್ಭದಲ್ಲಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಎಚ್.ಎಮ್. ಮಧು, ಹಿರಿಯ ನಿರ್ದೇಶಕರಾದ ಶ್ರೀ ಎಸ್.ಎಂ. ಓಂಕಾರಮೂರ್ತಿ, ನಿರ್ದೇಶಕರು ಮತ್ತು ವ್ಯವಸ್ಥಾಪಕರು ಹಾಜರಿದ್ದರು.

## ಆರು ತಿಂಗಳ ಗರಿಷ್ಠ ಮಟ್ಟಕ್ಕೆ ಸೇವಾ ವಲಯದ ಚಟುವಟಿಕೆ

**ನವದೆಹಲಿ :** ದೇಶದ ಸೇವಾ ವಲಯದ ಚಟುವಟಿಕೆಗಳು ಡಿಸೆಂಬರ್‌ನಲ್ಲಿ ಆರು ತಿಂಗಳ ಗರಿಷ್ಠ ಮಟ್ಟಕ್ಕೆ ಏರಿಕೆ ಕಂಡಿವೆ ಎಂದು ಎಸ್‌ಆ್ಯಂಡ್‌ಪಿ ಗ್ಲೋಬಲ್ ಇಂಡಿಯಾ ಸಂಸ್ಥೆ ಹೇಳಿದೆ. ಮಾರುಕಟ್ಟೆ ಸ್ಥಿತಿಯು ಅನುಕೂಲಕರವಾಗಿ ಇರುವುದು ಹಾಗೂ ಹೊಸ ವಹಿವಾಟುಗಳಿಗೆ ಬೇಡಿಕೆ ಹೆಚ್ಚಾಗುತ್ತಿರುವುದೇ ಇದಕ್ಕೆ ಕಾರಣ ಎಂದು ಅದು ತಿಳಿಸಿದೆ. ಸೇವಾ ವಲಯದ ಚಟುವಟಿಕೆಗಳನ್ನು ತಿಳಿಸುವ ಪಿಎಂಐ ಬಿಸಿನೆಸ್ ಆ್ಯಕ್ಟಿವಿಟಿ ಇಂಡೆಕ್ಸ್ ನವೆಂಬರ್‌ನಲ್ಲಿ 56.4ರಷ್ಟು ಇದ್ದಿದ್ದು ಡಿಸೆಂಬರ್‌ನಲ್ಲಿ 58.5ಕ್ಕೆ ಏರಿಕೆ ಆಗಿದೆ. ಇದು 2022ರ ಮಧ್ಯಭಾಗದ ನಂತರದಲ್ಲಿ ಕಂಡುಬಂದಿರುವ ಅತ್ಯಂತ ವೇಗದ ಬೆಳವಣಿಗೆ.

ಡಿಸೆಂಬರ್‌ನಲ್ಲಿ ಹೆಚ್ಚಿನ ಸಂಖ್ಯೆಯ ಉದ್ಯೋಗಗಳು ಸೃಷ್ಟಿಯಾಗಿವೆ. ಕಂಪನಿಗಳು 2023ರಲ್ಲಿ ತಮ್ಮ ವಹಿವಾಟಿನ ಬೆಳವಣಿಗೆಯ ಬಗ್ಗೆ ಹೆಚ್ಚಿನ ಆಶಾವಾದ ಹೊಂದಿವೆ. ಬೆಳವಣಿಗೆಯಲ್ಲಿ ಏರಿಕೆ ಕಂಡುಬರಲಿದೆ ಎಂದು ಶೇ.31ರಷ್ಟು ಕಂಪನಿಗಳು ಹೇಳಿದ್ದರೆ, ಇಳಿಕೆ ಕಾಣಲಿದೆ ಎನ್ನುವುದು ಶೇ.2ರಷ್ಟು ಕಂಪನಿಗಳ ನಿರೀಕ್ಷೆಯಾಗಿದೆ ಎಂದು ಎಸ್ ಆ್ಯಂಡ್ ಪಿ ಗ್ಲೋಬಲ್ ಮಾರ್ಕೆಟ್ ಇಂಟೆಲಿಜೆನ್ಸ್‌ನ ಅರ್ಥಶಾಸ್ತ್ರದ ಸಹಾಯಕ ನಿರ್ದೇಶಕಿ ಪಾಲಿಯಾನ ಡಿ. ಲಿಮಾ ಹೇಳಿದ್ದಾರೆ.

ಕೆಲಸಗಾರರ ಮೇಲೆ ಮಾಡುತ್ತಿರುವ ವೆಚ್ಚ ಹೆಚ್ಚಾಗುತ್ತಿರುವುದು, ವಿದ್ಯುತ್, ಆಹಾರ ಮತ್ತು ಸಾಗಣೆ ವೆಚ್ಚದಲ್ಲಿ ಆಗುತ್ತಿರುವ ಏರಿಕೆಯಿಂದಾಗಿ ಕಂಪನಿಗಳ ವೆಚ್ಚವು ಡಿಸೆಂಬರ್‌ನಲ್ಲಿ ಇನ್ನಷ್ಟು ಹೆಚ್ಚಾಗಿದೆ. ತಯಾರಿಕೆ ಮತ್ತು ಸೇವಾ ವಲಯಗಳ ಒಟ್ಟು ಬೆಳವಣಿಗೆಯನ್ನು ಸೂಚಿಸುವ ಕಂಪೊಸಿಟ್ ಪಿಎಂಐ ಔಟ್‌ಪುಟ್ ಇಂಡೆಕ್ಸ್ ನವೆಂಬರ್‌ನಲ್ಲಿ 56.7ರಷ್ಟು ಇದ್ದಿದ್ದು, ಡಿಸೆಂಬರ್‌ನಲ್ಲಿ 59.4ಕ್ಕೆ ಏರಿಕೆ ಆಗಿದೆ.

# 2023ರಲ್ಲಿ ಮೂರನೇ ಒಂದರಷ್ಟು ಜಾಗತಿಕ ಆರ್ಥಿಕತೆ ಹಿಂಜರಿತ : ಐಎಂಎಫ್ ಎಚ್ಚರಿಕೆ

**ನವದೆಹಲಿ :** ಪ್ರಪಂಚದ ಮೂರನೇ ಒಂದರಷ್ಟು ಆರ್ಥಿಕತೆ 2023ರಲ್ಲಿ ಹಿಂಜರಿತ ಅನುಭವಿಸಲಿದೆ ಎಂದು ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆಯ (ಐಎಮ್‌ಎಫ್) ಮುಖ್ಯಸ್ಥೆ ಕ್ರಿಸ್ಟಲಿನಾ ಜಾರ್ಜೀವ ಎಚ್ಚರಿಕೆ ನೀಡಿದ್ದಾರೆ. ಅಮೆರಿಕ, ಐರೋಪ್ಯ ಒಕ್ಕೂಟ ಹಾಗೂ ಚೀನಾದಲ್ಲಿ ಆರ್ಥಿಕತೆ ಮಂದಗತಿಯಲ್ಲಿ ಸಾಗಲಿದ್ದು 2023ರ ಕಠಿಣ ವರ್ಷವಾಗಲಿದೆ ಎಂದು ಅವರು ಹೇಳಿದ್ದಾರೆ.




ರಷ್ಯಾ-ಉಕ್ರೇನ್ ಯುದ್ಧ, ಬೆಲೆ ಏರಿಕೆ, ಬಡ್ಡಿದರ ಹೆಚ್ಚಳ ಹಾಗೂ ಕೋವಿಡ್ ಪ್ರಕರಣಗಳ ಏರಿಕೆ ಮುಂತಾದವುಗಳು ಆರ್ಥಿಕತೆಯ ಮೇಲೆ ಪರಿಣಾಮ ಬೀರಲಿದೆ ಎಂದು ಅವರು ನುಡಿದಿದ್ದಾರೆ.

ಪ್ರಪಂಚದ ಮೂರನೇ ಒಂದರಷ್ಟು ಆರ್ಥಿಕತೆಗಳು 2023ರಲ್ಲಿ ಹಿಂಜರಿತಕ್ಕೆ ಒಳಗಾಗಲಿವೆ. ಆರ್ಥಿಕ ಹಿಂಜರಿತದ ಭಯ ಇಲ್ಲದ ದೇಶಗಳೂ ಕೂಡ, ಹಿಂಜರಿತದ ಪರಿಣಾಮ ಎದುರಿಸಲಿದೆ ಎಂದು ಅವರು ಹೇಳಿದ್ದಾರೆ. ಆರ್ಥಿಕ ಹಿಂಜರಿತದಿಂದ ತಪ್ಪಿಸಿಕೊಳ್ಳಲು ಐರೋಪ್ಯ ಒಕ್ಕೂಟಕ್ಕೆ ಅಸಾಧ್ಯ ಎಂದಿರುವ ಅವರು, ಅಮೆರಿಕ ಹಿಂಜರಿತದ ಅಂಚಿನಲ್ಲಿದೆ. ಚೀನಾಗೆ 2023 ತ್ರಾಸದಾಯಕವಾಗಿರಲಿದೆ ಎಂದು ಅವರು ಭವಿಷ್ಯ ನುಡಿದಿದ್ದಾರೆ. ಮುಂದಿನ ಎರಡು ತಿಂಗಳು ಚೀನಾಗೆ ಕಠಿಣವಾಗಿರಲಿದೆ. ಇದರಿಂದಾಗಿ ಚೀನಾದ ಬೆಳವಣಿಗೆ ಋಣಾತ್ಮಕವಾಗಿರಲಿದೆ. ಈ ಪ್ರದೇಶದ ಆರ್ಥಿಕತೆಗೆ ಹಾಗೂ ಜಾಗತಿಕ ಆರ್ಥಿಕತೆ ಮೇಲೂ ಋಣಾತ್ಮಕ ಪರಿಣಾಮ ಬೀರಲಿದೆ ಎಂದಿದ್ದಾರೆ.

# ನೋಟ್ ಬ್ಯಾನ್ ಬಳಿಕ ನಗದು ಚಲಾವಣೆ ಶೇ. 83ರಷ್ಟು ಏರಿಕೆ !

**ನವದೆಹಲಿ :** ನೋಟು ರದ್ಧತಿ ಅಥವಾ ಡಿಮಾನೆಟೈಸೇಷನ್ ಬಳಿಕ ಸಾರ್ವಜನಿಕರಲ್ಲಿರುವ ನಗದು ಮೌಲ್ಯ ದುಪ್ಪಟ್ಟಾಗಿದ್ದು, ನಗದು ಚಲಾವಣೆ ಶೇ.83ರಷ್ಟು ಏರಿಕೆಯಾಗಿದೆ ಎಂದು ರಿಸರ್ವ್ ಬ್ಯಾಂಕ್ ಅಂಕಿ ಅಂಶಗಳು ಮಾಹಿತಿ ನೀಡಿವೆ. ಚಲಾವಣೆಯಲ್ಲಿದ್ದ ಶೇ.86ರಷ್ಟು ಕರೆನ್ಸಿಯನ್ನು ರದ್ದುಗೊಳಿಸಿದ ಆರು ವರ್ಷಗಳ ಬಳಿಕ ಸಾರ್ವಜನಿಕರಲ್ಲಿರುವ ನಗದು ಮೌಲ್ಯ ದುಪ್ಪಟ್ಟಾಗಿದೆ. ಮಾಧ್ಯಮಗಳಿಗೆ ದೊರೆತ ರಿಸರ್ವ್ ಬ್ಯಾಂಕ್ ಅಂಕಿ ಅಂಶಗಳ ಪ್ರಕಾರ, 2022ರ ಡಿಸೆಂಬರ್ 23ರಂದು ದೇಶದಲ್ಲಿ ಚಲಾವಣೆಯಲ್ಲಿರುವ ಕರೆನ್ಸಿಯ ಮೌಲ್ಯ (ಅಥವಾ ಸಾರ್ವಜನಿಕರ ಬಳಿಯಿರುವ ನಗದು) 32.42 ಲಕ್ಷ ಕೋಟಿ ರೂ. ಎಂದು ತಿಳಿದು ಬಂದಿದೆ.



ಕಪ್ಪುಹಣ ತಡೆ ಮತ್ತು ಭ್ರಷ್ಟಾಚಾರದ ವಿರುದ್ಧ ಹೋರಾಡಲು ಪ್ರಧಾನಿ ನರೇಂದ್ರ ಮೋದಿ ಹಳೆಯ 1,000 ಮತ್ತು 500 ರೂ. ನೋಟುಗಳನ್ನು ನ.4, 2016ರಂದು ನಿಷೇಧಿಸಲಾಗಿತ್ತು. ಅಂದು 17.74ಲಕ್ಷ ಕೋಟಿ ರೂ. ಮೌಲ್ಯದ ನೋಟುಗಳೂ ಚಲಾವಣೆಯಲ್ಲಿದ್ದವು. ನೋಟು ನಿಷೇಧದ ಬಳಿಕ ಚಲಾವಣೆಯಲ್ಲಿರುವ ನಗದು ಮೌಲ್ಯ 9ಲಕ್ಷ ಕೋಟಿಯಷ್ಟು ಕುಸಿದಿತ್ತು. 2017ರ ಜನವರಿಗೆ ಹೋಲಿಸಿದರೆ, ಚಲಾವಣೆಯಲ್ಲಿರುವ ನಗದು 3 ಪಟ್ಟು ಏರಿಕೆ ಅಥವಾ ಶೇ.260ರಷ್ಟು ಜಿಗಿತ ಕಂಡಿದೆ. ನ.4, 2016 ರಿಂದ ಪರಿಗಣಿಸಿದರೆ ಸುಮಾರು 83 ಪ್ರತಿಶತ ಏರಿಕೆಯಾಗಿದೆ ಎಂದು ಹೇಳಲಾಗಿದೆ.

ನ.8, 2016 ರಂದು ಚಲಾವಣೆಯಲ್ಲಿದ್ದ ಒಟ್ಟು 15.4ಲಕ್ಷ ಕೋಟಿ ರೂ. ಮೌಲ್ಯದ ನೋಟುಗಳಲ್ಲಿ 15.3ಲಕ್ಷ ಕೋಟಿ ರೂ. ಮೌಲ್ಯದ ಅಥವಾ ಶೇ.99.3ರಷ್ಟು ನೋಟುಗಳನ್ನು ಸಾರ್ವಜನಿಕರು ಹಿಂದಿರುಗಿಸಿದ್ದರು. ನಿಷೇಧಿತ ಕರೆನ್ಸಿ ನೋಟುಗಳ ಬದಲಿಗೆ ಹೊಸ 500 ಮತ್ತು 2,000 ರೂ. ನೋಟುಗಳು ಚಲಾವಣೆಗೆ ಬಂದಿವೆ. ಆದರೆ, 1,000 ರೂ. ನೋಟು ಮರು ಚಲಾವಣೆಗೆ ಬಂದಿಲ್ಲ.

ರಿಮೊನೆಟೈಸೇಶನ್ ವೇಗವನ್ನು ಹೆಚ್ಚಿಸಿದಂತೆ, CIC ವಾರದಿಂದ ವಾರಕ್ಕೆ ಏರಿತು ಮತ್ತು ಆರ್ಥಿಕ ವರ್ಷದ ಅಂತ್ಯದ ವೇಳೆಗೆ ಗರಿಷ್ಠ ಶೇ.74.3 ತಲುಪಿತು. ನಂತರ ಜೂನ್ 2017ರ ಅಂತ್ಯದ ವೇಳೆಗೆ ಅದರ ಪೂರ್ವ ನೋಟು ಅಮಾನ್ಯೀಕರಣದ ಗರಿಷ್ಠ 85 ಪ್ರತಿಶತದಷ್ಟಿತ್ತು ಎಂದು ಹೇಳಲಾಗಿದೆ. ನೋಟುಗಳನ್ನು ಅಮಾನ್ಯ ಮಾಡಿದ್ದ ಕೇಂದ್ರ ಸರ್ಕಾರದ ನಿರ್ಧಾರ ಪ್ರಶ್ನಿಸಿ ಸಲ್ಲಿಕೆಯಾಗಿದ್ದ ಅರ್ಜಿಗಳ ಕುರಿತು ತೀರ್ಪನ್ನು ಸುಪ್ರೀಂ ಕೋರ್ಟ್ ಸೋಮವಾರ ಪ್ರಕಟಿಸಿದ್ದು, ನೋಟು ಅಮಾನ್ಯಗೊಳಿಸಿದ ಸರ್ಕಾರದ ನಿರ್ಧಾರವನ್ನು 4:1ರ ಬಹುಮತದ ತೀರ್ಪಿನೊಂದಿಗೆ ಸುಪ್ರೀಂಕೋರ್ಟ್ ಎತ್ತಿಹಿಡಿದಿದೆ.

# ದಿ. ಆರ್ಯಾದ್ ಕೋ-ಆಪ್ ಬ್ಯಾಂಕ್‌ನ ದಿನದರ್ಶಿಕೆ ಬಿಡುಗಡೆ
# ಆರ್ಯಾದ್ ಬ್ಯಾಂಕ್ ಗ್ರಾಹಕರ ವಿಶ್ವಾಸಕ್ಕೆ ಪಾತ್ರವಾಗಿದೆ : ಡಾ. ಆರ್.ಎನ್.ಪಾಟೀಲ



**ಗದಗ, ಡಿ. 31 :** ಗದುಗಿನ ದಿ. ಆರ್ಯಾದ್ ಕೋ-ಆಪರೇಟಿವ್ ಬ್ಯಾಂಕ್ ಗ್ರಾಹಕರಿಗೆ ಉತ್ತಮ ಸೇವೆ ಒದಗಿಸುವ ಮೂಲಕ ವಿಶ್ವಾಸಕ್ಕೆ ಪಾತ್ರವಾಗಿದೆ ಎಂದು ಗದಗ ಜಿಲ್ಲಾ ನಿವೃತ್ತ ಸರ್ಜನ್ ಹಿರಿಯ ವೈದ್ಯ ಡಾ. ಆರ್.ಎನ್. ಪಾಟೀಲ ಅಭಿಪ್ರಾಯಪಟ್ಟರು.

ಅವರು ಶುಕ್ರವಾರ ನಗರದ ಆರ್ಯಾದ್ ಕೋ-ಆಪರೇಟಿವ್ ಬ್ಯಾಂಕ್ ಸಭಾಂಗಣದಲ್ಲಿ ಏರ್ಪಡಿಸಿದ್ದ 2023ರ ದಿನದರ್ಶಿಕೆಯನ್ನು ಬಿಡುಗಡೆಗೊಳಿಸಿ ಮಾತನಾಡಿದರು.

ಆರ್ಥಿಕವಾಗಿ ಹಿಂದುಳಿದ ಸಮುದಾಯವನ್ನು ಸಬಲೀಕರಣ ಮಾಡುವ ನಿಟ್ಟಿನಲ್ಲಿ ಬ್ಯಾಂಕ್ ಬೀದಿ ಬದಿ ವ್ಯಾಪಾರಸ್ಥರಿಗೆ ಸೇರಿದಂತೆ ವ್ಯಾಪಾರಸ್ಥರಿಗೆ, ಸ್ವಯಂ ಉದ್ಯೋಗ ಕೈಗೊಳ್ಳುವವರಿಗೆ ಹಾಗೂ ವಿವಿಧ ವೃತ್ತಿಗಳಲ್ಲಿರುವವರಿಗೆ ಆರ್ಥಿಕ ನೆರವು ನೀಡಲು ಮುಂದಾಗಿರುವುದು ಅಭಿನಂದನೀಯ ಒಟ್ಟಾರೆಯಾಗಿ ಈ ಬ್ಯಾಂಕ್ ಗ್ರಾಹಕರ ವಿಶ್ವಾಸಕ್ಕೆ ಪಾತ್ರವಾಗಿದೆ ಎಂದರು.

ಅಗತ್ಯ ಮತ್ತು ತುರ್ತು ಸಂದರ್ಭಗಳಲ್ಲಿ ಬ್ಯಾಂಕ್‌ನ ಸಿಬ್ಬಂದಿಯವರು ಗ್ರಾಹಕರಿದ್ದಲ್ಲೇ ಹೋಗಿ ಸೇವೆ ಒದಗಿಸುತ್ತಿದ್ದು ಇದು ಗ್ರಾಹಕರ ಒದಗುವ ಅನಾನುಕೂಲತೆಯನ್ನು ನೀಗಿಸುವುದಷ್ಟೇ ಅಲ್ಲ ಅವರಿಗೆ ತಕ್ಷಣ ಹಣ ಒದಗಿಸಿ ಸಮಯವನ್ನು ಉಳಿಸಿದಂತಾಗುವುದು ಎಂದರು.

ಇನ್ನೋರ್ವ ಮುಖ್ಯ ಅತಿಥಿ ಗದಗ-ಬೆಟಗೇರಿ ನಗರಸಭೆಯ ನಿವೃತ್ತ ಆರೋಗ್ಯಾಧಿಕಾರಿ ಹಿರಿಯ ವೈದ್ಯರಾದ ಡಾ. ಎನ್.ಎಸ್.ಬಿರಾದಾರ ಅವರು ಮಾತನಾಡಿ ಹಲವಾರು ವರ್ಷಗಳಿಂದ ನಾನು ಈ ಬ್ಯಾಂಕ್‌ನ ಗ್ರಾಹಕನಾಗಿದ್ದು ಬ್ಯಾಂಕ್ ಗ್ರಾಹಕರಿಗೆ ಉತ್ತಮ ಸೇವೆ ಒದಗಿಸುತ್ತಿದೆ ಬರಲಿರುವ ದಿನಗಳಲ್ಲಿ ಇನ್ನೂ ಉತ್ಕೃಷ್ಟಗೊಳ್ಳಲಿ ಎಂದರು.


ಗದಗ ಐಎಂಎ ಮಾಜಿ ಅಧ್ಯಕ್ಷ ಡಾ.ಪ್ಯಾರಅಲಿ ನೂರಾನಿ ಅವರು ಮಾತನಾಡಿ ಆರ್ಯಾದ್ ಬ್ಯಾಂಕ್ ಆರಂಭದಲ್ಲಿ ಸಣ್ಣ ಪ್ರಮಾಣದಲ್ಲಿ ಸೇವೆ ಆರಂಭಿಸಿದ್ದು ಇಂದು ಆಧುನಿಕತೆಯೊಂದಿಗೆ ಪರಿಣಿತ ಆಡಳಿತ ವರ್ಗ, ಸಿಬ್ಬಂದಿ ವರ್ಗದವರ ಸೇವೆಯಿಂದಾಗಿ ಹೆಸರಾಗಿದೆ ಎಂದರು.

ಗ್ರಾಹಕರ ಪರವಾಗಿ ಗದಗ ಜಿಲ್ಲಾ ಚೇಂಬರ್ ಆಫ್ ಕಾಮರ್ಸ್‌ನ ಗೌರವ ಕಾರ್ಯದರ್ಶಿ ರಾಜಣ್ಣ ಗುಡಿಮನಿ, ರಾಮಚಂದ್ರ ಹಬೀಬ, ಅಬ್ದುಲ್‌ಮುನಾಫ್ ಮುಲ್ಲಾ ಮಾತನಾಡಿ ಸಣ್ಣ ಪ್ರಮಾಣದಲ್ಲಿದ್ದ ನಮ್ಮ ವ್ಯಾಪಾರ ವಹಿವಾಟನ್ನು ಉನ್ನತೀಕರಣ ಮಾಡಿಕೊಳ್ಳಲು ಈ ಬ್ಯಾಂಕ್ ಆರ್ಥಿಕ ನೆರವು ನೀಡಿದ ಪರಿಣಾಮವಾಗಿ ನಮ್ಮ ವ್ಯಾಪಾರ ವಹಿವಾಟು ಅಭಿವೃದ್ಧಿ ಹೊಂದುತ್ತ ಬಂದಿದೆ. ತೊಂದರೆಯಲ್ಲಿದ್ದವರಿಗೆ ನೆರವಾದವರನ್ನು ನಾವಿಂದು ಪ್ರಾಂಜಲ ಮನಸ್ಸಿನಿಂದ ಸ್ಮರಿಸುವೆವು. ಬ್ಯಾಂಕ್‌ನ ಚೇರಮನ್, ನಿರ್ದೇಶಕರ ಸಮರ್ಥ ಆಡಳಿತದಿಂದ ಬ್ಯಾಂಕ್ ಪ್ರಗತಿ ಹೊಂದಿದೆ ಗ್ರಾಹಕರಿಗೆ ಪ್ರಗತಿಯಾಗಲು ನೆರವಾಗಿದೆ ಎಂದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಬ್ಯಾಂಕ್‌ನ ಚೇರಮನ್ ಜನಾಬ ಸರಫರಾಜಅಹ್ಮದ್ ಎಸ್. ಉಮಚಗಿ ಅವರು ಗ್ರಾಹಕರ ಬೇಕು ಬೇಡಿಕೆಗಳನ್ನು ಪೂರೈಸುತ್ತ ಬಂದಿರುವ ಬ್ಯಾಂಕ್ ತನ್ನೆಲ್ಲ ಗ್ರಾಹಕರ ಬಗ್ಗೆ ಹೆಮ್ಮೆ ಪಡುತ್ತದೆ. ವ್ಯವಹಾರ ವಿಶ್ವಾಸಕ್ಕೆ ಅರ್ಹತೆಯನ್ನು ಪಡೆದ ಪರಿಣಾಮವಾಗಿ ಬ್ಯಾಂಕ್‌ನ ಗ್ರಾಹಕರ, ಠೇವಣಿದಾರರ, ಶೇರುದಾರರ ಸಂಖ್ಯೆ ಹೆಚ್ಚುತ್ತಿದೆ. ಸಾಲ ಪಡೆದುಕೊಳ್ಳುವವರ ಸಂಖ್ಯೆಯೂ ಹೆಚ್ಚುತ್ತಿದೆ. ಸಾಲವನ್ನು ಮರುಪಾವತಿಸುವಲ್ಲಿ ಗ್ರಾಹಕರು ಮುತುವರ್ಜಿ ವಹಿಸುತ್ತಿರುವದು ಬ್ಯಾಂಕ್‌ನ ಘನತೆ, ಗೌರವ ಮತ್ತು ವಿಶ್ವಾಸವನ್ನು ಹೆಚ್ಚಿಸುತ್ತಿದೆ ಎಂದರು.

ಜನಾಬ ಜಮಾಲಸಾಬನವರ ಕುರಾಣ ಪಠಿಸಿದರು ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕ ಎ.ಜಿ.ಯರಗುಡಿ ಸ್ವಾಗತಿಸಿದರು, ಎಂ.ಎಂ.ಶಿರಹಟ್ಟಿ ಪರಿಚಯಿಸಿ ನಿರೂಪಿಸಿದರು ಕೊನೆಗೆ ಶಾಖಾ ವ್ಯವಸ್ಥಾಪಕ ಎಚ್.ಜೆ.ಹರ್ಲಾಪೂರ ವಂದಿಸಿದರು. ಸಮಾರಂಭದಲ್ಲಿ ಬ್ಯಾಂಕ್‌ನ ಉಪಾಧ್ಯಕ್ಷರು, ನಿರ್ದೇಶಕರು, ಗ್ರಾಹಕರು, ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

# ಜ್ಞಾನಯೋಗಿ ಶ್ರೀ ಸಿದ್ಧೇಶ್ವರ ಮಹಾಸ್ವಾಮೀಜಿ ಅಸ್ತಂಗತ



ಪ್ರವಚನದ ಮೂಲಕ ವಿಶ್ವಕ್ಕೆ ಜ್ಞಾನ ಪ್ರಸಾರ ಮಾಡಿ 'ಶತಮಾನದ ಸಂತ' ಎನಿಸಿಕೊಂಡ ಸರಳತೆಯ ಸಾಕಾರಮೂರ್ತಿ, ಜ್ಞಾನಯೋಗಿ, ನಡೆದಾಡುವ ದೇವರು ವಿಜಯಪುರದ ಜ್ಞಾನಯೋಗಾಶ್ರಮದ ಪರಮಪೂಜ್ಯ ಶ್ರೀ ಸಿದ್ಧೇಶ್ವರ ಮಹಾಸ್ವಾಮೀಜಿಗಳು 82ನೇ ವಯಸ್ಸಿನಲ್ಲಿ ದಿನಾಂಕ : 02.01.2023ರ ಸೋಮವಾರದಂದು ಲಿಂಗೈಕ್ಯರಾದರು. ಅತ್ಯಂತ ಸರಳ ನಡೆನುಡಿ, ಜ್ಞಾನಪೂರ್ಣವಾದ ಪ್ರವಚನಗಳಿಂದಾಗಿ ಪ್ರಪಂಚದಾದ್ಯಂತ ಅಪಾರ ಭಕ್ತರನ್ನು ಸಂಪಾದಿಸಿದ್ದರು. ಶ್ರೀಗಳ ಪ್ರವಚನಗಳಿಗೆ ಲಕ್ಷಾಂತರ ಸಂಖ್ಯೆಯಲ್ಲಿ ಜನ ಸೇರುವಂತೆ ಮಾಡಿದ್ದು ಅವರ ಸರಳ ವ್ಯಕ್ತಿತ್ವ.

ಬಿಳಿ ಅಂಗಿ, ಬಿಳಿ ಲುಂಗಿಧಾರಿಗಳಾಗಿರುತ್ತಿದ್ದ ಶ್ರೀಗಳು ಯಾವತ್ತೂ ಕಾವಿ ಧರಿಸಲಿಲ್ಲ. ಜನರಲ್ಲಿನ ಮೌಢ್ಯದ ನಿವಾರಣೆ ಜ್ಞಾನದಿಂದ ಮಾತ್ರ ಸಾಧ್ಯ ಎಂದು ನಂಬಿದವರಾಗಿದ್ದರು. ಕಬ್ಬಿಣದ ಕಡಲೆಯಂತ ಆಧ್ಯಾತ್ಮಿಕ ವಿಷಯಗಳನ್ನು ಅತ್ಯಂತ ಸರಳೀಕರಿಸಿ ಹೇಳುವುದು ಅವರ ಪ್ರವಚನಗಳ ವೈಶಿಷ್ಟ್ಯವಾಗಿತ್ತು. 1941ರಲ್ಲಿ ಬಿಜ್ಜರಗಿಯಲ್ಲಿ ಜನಿಸಿದ ಶ್ರೀ ಸಿದ್ಧೇಶ್ವರ ಸ್ವಾಮೀಜಿಗಳು ಆಧ್ಯಾತ್ಮ ಕ್ಷೇತ್ರದ ಮಹಾನ್ ಸಂತರು. ತಮ್ಮ 9ನೇ ವಯಸ್ಸಿನಲ್ಲಿಯೇ ಆಧ್ಯಾತ್ಮದ ಸೆಳೆತಕ್ಕೊಳಗಾಗಿ ಮನೆ ಬಿಟ್ಟು ಜ್ಞಾನಯೋಗಾಶ್ರಮದ ಮಲ್ಲಿಕಾರ್ಜುನ ಸ್ವಾಮೀಜಿಗಳ ಶಿಷ್ಯತ್ವ ಸ್ವೀಕರಿಸಿದ ಶ್ರೀಗಳು ತಮ್ಮ ಪ್ರವಚನಗಳಿಂದ ದೇಶ ವಿದೇಶಗಳಲ್ಲಿ ಪ್ರಖ್ಯಾತರು. ದೇಶದ ಅತ್ಯುನ್ನತ ಗೌರವವಾದ ಪದ್ಮಶ್ರೀ ಪ್ರಶಸ್ತಿಯನ್ನು ನಿರಾಕರಿಸಿದ್ದ ಶ್ರೀಗಳು ಸನ್ಯಾಸಿಗಳಿಗೆ ಪ್ರಶಸ್ತಿ ಪುರಸ್ಕಾರಗಳು ಶೋಭಿಸಲಾರವು ಎಂದು ಪ್ರಧಾನಿಗಳಿಗೆ ಪತ್ರ ಬರೆದಿದ್ದರು. ವೈರಾಗ್ಯಮೂರ್ತಿಗಳಾಗಿದ್ದ ಶ್ರೀಗಳು ನುಡಿದಂತೆ ನಡೆದ ಸಂತರು. ತಮ್ಮ ಇಡೀ ಬದುಕನ್ನು ಜ್ಞಾನ ಪ್ರಸಾರಕ್ಕೆ ಮೀಸಲಿಟ್ಟಿದ್ದ ಶ್ರೀಗಳ ಹೆಸರಿನಲ್ಲಿ ಯಾವುದೇ ಆಸ್ತಿ ಇಲ್ಲ. ಬ್ಯಾಂಕ್ ಖಾತೆ ಇಲ್ಲ. ಆಶ್ರಮಕ್ಕೆ ಅನುದಾನ ಘೋಷಿಸಿದಾಗಲೂ ನಿರಾಕರಿಸಿದ್ದರು.

ಯಾರದೇ ಹಂಗಿಲ್ಲದೆ ಹಕ್ಕಿಯಂತೆ ಬದುಕಿ ತಮ್ಮ ನುಡಿಮುತ್ತುಗಳ ಮೂಲಕ ಲಕ್ಷಾಂತರ ಭಕ್ತರ ಬದುಕನ್ನು ಸುಂದರಗೊಳಿಸಿದವರು. ಶ್ರೀಗಳ ನಿಧನಕ್ಕೆ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳದ ಅಧ್ಯಕ್ಷರಾದ ಶ್ರೀ ಎಚ್.ಕೆ. ಪಾಟೀಲರವರು, ಉಪಾಧ್ಯಕ್ಷರಾದ ಶ್ರೀ ಬಿ.ಎಸ್. ಪರಮಶಿವಯ್ಯನವರು ಹಾಗೂ ಆಡಳಿತ ಮಂಡಳಿ ಸದಸ್ಯರು ಮತ್ತು ಮುಖ್ಯಕಾರ್ಯನಿರ್ವಹಣಾಧಿಕಾರಿ, ಸಿಬ್ಬಂದಿ ವರ್ಗದವರು ತೀವ್ರ ಸಂತಾಪ ವ್ಯಕ್ತಪಡಿಸಿ, ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಿದರು.

---

## ನಿಮ್ಮ ಪ್ರಶ್ನೆ ನಮ್ಮ ಉತ್ತರ






▸▸ **ಸುಧಾಕರ್ ಭಟ್**, ಬ್ಯಾಂಕಿಂಗ್ ಸಲಹೆಗಾರರು.

**ನಮ್ಮ ಒಬ್ಬ ಸದಸ್ಯನು ಹೋಟೆಲ್ ವ್ಯಾಪಾರದ ಅಭಿವೃದ್ಧಿಗಾಗಿ ಒಂದು ಷೆಡ್ಯೂಲ್ಡ್ ಬ್ಯಾಂಕಿನಿಂದ ರೂ.1.50 ಕೋಟಿ ಸಾಲ ಪಡೆದಿದ್ದಾನೆ. ಆ ಬ್ಯಾಂಕಿನಲ್ಲಿ ಈಗ ಸಾಲದ ಮೊತ್ತ ರೂ.1.00ಕೋಟಿ ಇದ್ದು, ಸಾಲವು ಸ್ಟ್ಯಾಂಡರ್ಡ್ ಆಸ್ತಿಯೆಂದು ಪರಿಗಣಿಸಲ್ಪಟ್ಟಿದೆ. ಸದಸ್ಯನು ಆತನ ಷೆಡ್ಯೂಲ್ಡ್ ಬ್ಯಾಂಕಿನಲ್ಲಿರುವ ಸಾಲವನ್ನು ನಮ್ಮ ಬ್ಯಾಂಕು ವಹಿಸಿಕೊಂಡು ಆತನ ವ್ಯಾಪಾರ ಅಭಿವೃದ್ಧಿಗಾಗಿ ಸಾಲದ ಮೊತ್ತವನ್ನು ರೂ.2.00ಕೋಟಿಗೆ ಹೆಚ್ಚಿಸಲು ಬೇಡಿಕೆ ಇಟ್ಟಿದ್ದಾನೆ. ಆತ ರೂ.4.00 ಕೋಟಿ ಮೊತ್ತದ ಆಸ್ತಿಯನ್ನು ಸಾಲಕ್ಕೆ ಅಡಮಾನ ಮಾಡಲು ಸಿದ್ಧನಿದ್ದಾನೆ. ಈ ವಿಷಯದಲ್ಲಿ ನಮ್ಮ ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

(ಅ) ನಮ್ಮ ಬ್ಯಾಂಕು ಸಾಲವನ್ನು ವಹಿಸಿಕೊಂಡು (Take Over) ಸಾಲದ ಮೊತ್ತವನ್ನು ಹೆಚ್ಚಿಸಬಹುದೇ?

(ಆ) ಹೌದಾದರೆ, ಸಾಲದ ಅವಧಿ ಎಷ್ಟಿರಬೇಕು?

(ಇ) ಸಾಲವನ್ನು ಮಂಜೂರು ಮಾಡುವಾಗ ವಿಧಿಸಬೇಕಾದ ನಿಯಮಗಳು ಮತ್ತು ಷರತ್ತುಗಳು ಯಾವುವು?

– **ಪಟ್ಟಣ ಸಹಕಾರ ಬ್ಯಾಂಕ್ ಲಿ., ಉತ್ತರ ಕನ್ನಡ ಜಿಲ್ಲೆ.**

**ಉತ್ತರ :** (ಅ) ಬೇರೊಂದು ಬ್ಯಾಂಕಿನಿಂದ ಸಾಲವನ್ನು ವಹಿಸಿಕೊಳ್ಳುವುದಕ್ಕೆ (Take Over) ಸಂಬಂಧಿಸಿದಂತೆ ಆಡಳಿತ ಮಂಡಳಿ ಅನುಮೋದಿತ ನೀತಿಯನ್ನು ಬ್ಯಾಂಕು ಜಾರಿಗೆ ತರಬೇಕು. ವಹಿಸಿಕೊಳ್ಳಬಹುದಾದ ಸಾಲದ ಖಾತೆಗಳ ಸ್ವರೂಪಕ್ಕೆ ಸಂಬಂಧಿಸಿದ ಮಾನದಂಡಗಳು, ಮೇಲ್ವಿಚಾರಣಾ ಕಾರ್ಯವಿಧಾನ, ಒಂದು ವರ್ಷದೊಳಗೆ ಖಾತೆ ಸುಸ್ತಿಯಾದರೆ ಸಿಬ್ಬಂದಿ ಹೊಣೆಗಾರಿಕೆಯ ವಿಚಾರಣೆ ಮುಂತಾದ ವಿಷಯಗಳ ಬಗ್ಗೆ ನೀತಿಯಲ್ಲಿ ಸ್ಪಷ್ಟ ಉಲ್ಲೇಖವಿರಬೇಕು.

(ಆ) ಸಾಲ ಖಾತೆಯನ್ನು ವಹಿಸಿಕೊಳ್ಳುವ ಮುನ್ನ ಆ ಖಾತೆಗೆ ಸಂಬಂಧಿಸಿದ ಮತ್ತು ಸಾಲಗಾರನಿಗೆ ಸಂಬಂಧಿಸಿದ ಪೂರ್ಣ ಮಾಹಿತಿಯನ್ನು ಸಾಲ ಪಡೆದಿರುವ ಬ್ಯಾಂಕಿನಿಂದ ಪಡೆದುಕೊಳ್ಳಬೇಕು. ಖಾತೆಯು ಸ್ಟ್ಯಾಂಡರ್ಡ್ ಆಗಿರುವುದು ಅವಶ್ಯಕ.

(ಇ) ಅವಧಿ ಸಾಲಗಳನ್ನು ನಿರ್ದಿಷ್ಟ ಆಸ್ತಿಯನ್ನು ರಚಿಸಲು / ಖರೀದಿಸಲು ಮಂಜೂರು ಮಾಡಲಾಗುವುದು. "ವ್ಯಾಪಾರದ ಸುಧಾರಣೆ' ಒಂದು ಅಸ್ಪಷ್ಟ ಉದ್ದೇಶವಾಗಿದ್ದು, ಇದು ಅವಧಿ ಸಾಲವನ್ನು ಮಂಜೂರು ಮಾಡಲು ಕಾರಣವಾಗುವುದಿಲ್ಲ. ಅಲ್ಲದೆ, ಸಾಲಗಾರ ಒದಗಿಸುವ ಭದ್ರತೆಯ ಮೌಲ್ಯವು ಸಾಲವನ್ನು ಮಂಜೂರು ಮಾಡುವ ಏಕೈಕ ಮಾನದಂಡವಾಗಿರಬಾರದು. ಆದ್ದರಿಂದ, ಹೆಚ್ಚುವರಿ ಸಾಲದ ಅಗತ್ಯತೆಯನ್ನು ಬ್ಯಾಂಕು ದಾಖಲೆಗಳೊಂದಿಗೆ ಸಮರ್ಥಿಸಬೇಕು. ಸಾಲದ ಅವಧಿಯು ಸಾಲದ ಪ್ರಕಾರ ಮತ್ತು ವ್ಯವಹಾರದಿಂದ ನಗದು ಹರಿವಿನ ಮೇಲೆ ಅವಲಂಬಿತವಾಗಿದೆ.



## ಆನ್‌ಲೈನ್ ನ್ಯೂಸ್

ಈ ಪುಟದಲ್ಲಿನ ಸುದ್ದಿಗಳನ್ನು ಓದಿದ್ದೀರಾ...?
**ಕುತೂಹಲಕಾರಿಯಾದ ಸುದ್ದಿಗಳು** ನಿಮ್ಮ ಕಣ್ಣು ತಪ್ಪಿದ್ದರೆ, ಇಲ್ಲಿವೆ ಓದಿ.

- ಆದಿ ಕವಿ ಅಮೋಘವರ್ಷ ನೃಪತುಂಗರಿಂದ ಆರಂಭವಾಗಿ, ಪಂಪ, ರನ್ನರಿಂದ ಹಿಡಿದು, 8 ಜನ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರನ್ನು ಹೊಂದಿರುವ ದೇಶದ ಏಕೈಕ ಭಾಷೆ ನಮ್ಮ ಕನ್ನಡ ಎಂಬುದು ನಮಗೆ ಹೆಮ್ಮೆಯ ವಿಷಯ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಹೇಳಿದ್ದಾರೆ.
- ಗದಗ ತಾಲೂಕಿನಲ್ಲಿ ಕೋಟುಮಚಗಿಯ ರೈ ಶರಣಪ್ಪ ಜಗ್ಗಲ್ ಎಂಬುವವರು ಬೆಳೆದಿದ್ದ ಮೆಣಸಿನಕಾಯಿ ಕ್ವಿಂಟಲ್‌ಗೆ 70,199 ರೂಪಾಯಿಯ ದಾಖಲೆಗೆ ಮಾರಾಟವಾಗಿದೆ.
- ಪಾಟ್ನಾದ ಗಯಾ ಮುನ್ಸಿಪಲ್ ಕಾರ್ಪೊರೇಷನ್‌ನಲ್ಲಿ ಬೀದಿ ಕಸ ಗುಡಿಸುವ 60 ವರ್ಷದ ಮಹಿಳೆ ಚಿಂತಾದೇವಿ ಅವರು ಇತ್ತೀಚೆಗೆ ನಡೆದ ಕಾರ್ಪೋರೇಷನ್ ಚುನಾವಣೆಯಲ್ಲಿ ಸ್ಪರ್ಧಿಸಿ ಗೆದ್ದು ಅಲ್ಲಿನ ಉಪ ಮೇಯರ್ ಆಗಿ ಆಯ್ಕೆಯಾಗಿದ್ದಾರೆ.
- ಭೂಮಿ ಮೇಲಿನ ಅತಿ ಎತ್ತರ ಯುದ್ಧಭೂಮಿ ಸಿಯಾಚಿನ್ ನೀರ್ಗಲ್ಲಿನ ಯುದ್ಧಭೂಮಿಯಲ್ಲಿ ಮೊದಲ ಬಾರಿಗೆ ಮಹಿಳಾ ಅಧಿಕಾರಿ ಫೈರ್ ಅಂಡ್ ಫ್ಯೂರಿ ಕಾರ್ಪ್ಸ್‌ನ ಕ್ಯಾಪ್ಟನ್ ಶಿವ ಚೌಹಾಣ್ ಅವರು ಕರ್ತವ್ಯಕ್ಕೆ ನಿಯೋಜನೆಗೊಂಡಿದ್ದಾರೆ.
- ಛತ್ತೀಸ್‌ಗಢ ಪೊಲೀಸರ ಮಾದಕ ದ್ರವ್ಯ ಮತ್ತು ಅಕ್ರಮ ಮದ್ಯ ವಿರೋಧಿ ಅಭಿಯಾನ ನಿಜಾತ್‌ಗೆ ಅಪರಾಧ ತಡೆಯುವಲ್ಲಿನ ಮುಂದಾಳತ್ವಕ್ಕಾಗಿ ಇಂಟರ್‌ನ್ಯಾಷನಲ್ ಅಸೋಸಿಯೇಷನ್ ಆಫ್ ಚೀಫ್ಸ್ ಆಫ್ ಪೊಲೀಸ್ ಪ್ರಶಸ್ತಿ ಲಭಿಸಿದೆ.
- ಕುರಿಂಕುಳಂನ ರಮೇಶನ್ ಅವರು ಮಾಡಿದ್ದ ರೂ.12 ಲಕ್ಷ ಸಾಲಕ್ಕೆ, ಬಡ್ಡಿ ಸೇರಿ 40 ಲಕ್ಷ ರೂಪಾಯಿ ಪಾವತಿಸುವಂತೆ ಸಾಲಗಾರರ ಒತ್ತಾಯವನ್ನು ತಾಳಲಾರದೆ, ಕುಟುಂಬದ ಮೂವರೂ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.
- ಭಾರತೀಯ ನಾಯಿ ತಳಿಗಳ ಸಂಘದ ಅಧ್ಯಕ್ಷ ಸತೀಶ್ ಅವರು ದುಬಾರಿ ನಾಯಿಗಳನ್ನು ಖರೀದಿಸುವ ಹವ್ಯಾಸ ಹೊಂದಿದ್ದು, ಈಗ ಅವರು ಖರೀದಿಸಿರುವ ಕಾಕೇಸಿಯನ್ ಷೆಪರ್ಡ್ ಜಾತಿಯ ನಾಯಿಯ ಬೆಲೆ ಬರೋಬ್ಬರಿ 20 ಕೋಟಿ ರೂಪಾಯಿ.

## ಓದುಗರ ಅನಿಸಿಕೆ...



**ಉಳಿತಾಯ ಮಾಡುವುದು ಹೇಗೆ? :** ಕಳೆದ ವಾರದ ಸಂಚಿಕೆಯಲ್ಲಿ ಭವಿಷ್ಯದಲ್ಲಿ ಎದುರಾಗುವ ಮನೆ ಮಂದಿಯ ಅನಾರೋಗ್ಯ ಮುಂತಾದ ಅನಿರೀಕ್ಷಿತ ತುರ್ತುಗಳನ್ನು ಎದುರಿಸಲು ಪ್ರತಿ ತಿಂಗಳೂ ತಮ್ಮ ದುಡಿಮೆಯ ಒಂದು ಪಾಲನ್ನು ಉಳಿಸಲೇಬೇಕು ಎನ್ನುವ ಲೇಖನವಿದೆ. ಆದರೆ, ಇಂದು ಬರುವ ಸಂಬಳದಲ್ಲಿ, ಆದಾಯದಲ್ಲಿ ದಿನ ನಿತ್ಯದ ಖರ್ಚು ವೆಚ್ಚಗಳನ್ನು ನಿಬಾಯಿಸುವುದೇ ದುಸ್ತರವಾಗಿದೆ, ಉಳಿತಾಯ ಮಾಡುವುದು ಹೇಗೆ?

**▸▸ ಜ್ಞಾನೇಶ್ವರ ಕೆ.ಎಂ., ಬಳ್ಳಾರಿ**

**ಅವು ಹಾಗೆಯೇ ಇದ್ದರೆ ಚನ್ನ :** ಇಡೀ ದೇಶಕ್ಕೆ ಅನ್ವಯವಾಗುವಂತೆ ಒಂದೇ ಸಹಕಾರಿ ನೀತಿ ಜಾರಿಗೊಳಿಸಲಾಗುವುದು ಎಂದು ಕೇಂದ್ರ ಗೃಹ ಹಾಗೂ ಸಹಕಾರ ಸಚಿವ ಅಮಿತ್ ಶಾ ಹೇಳಿದ್ದಾರೆ. ಇದರಿಂದ ಸಹಕಾರ ಕ್ಷೇತ್ರದ ಏಕರೂಪದ ಪ್ರಗತಿ ಸಾಧ್ಯವಾಗಲಿದೆ ಎಂದು ಅವರು ಭಾವಿಸಿದಂತಿದೆ. ಅವರ ಅನಿಸಿಕೆ ಸರಿಯಾದುದಲ್ಲ. ಕಾರಣ; ನಮ್ಮಲ್ಲಿ ವಿವಿದ ಸ್ವರೂಪದ ಸಹಕಾರ ಸಂಘಗಳಿವೆ. ಅವು ಹಾಗೆಯೇ ಇದ್ದರೆ ಚನ್ನ ಎಂದೆನಿಸುತ್ತದೆ.

**▸▸ ಆರತಿ ಸುಂದರೇಶ್, ದಾವಣಗೆರೆ**

ಸಂಪಾದಕರು :
**ಪುಂಡಲೀಕ ಎನ್. ಕೇರೂರೆ,**
ಮುಖ್ಯ ಕಾರ್ಯನಿರ್ವಹಣಾಧಿಕಾರಿ,
ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳ ನಿ.,
ಬೆಂಗಳೂರು.

**ಇವರಿಗೆ,**

Edited, Published and printed by Pundalik N. Kerure, C.E.O. on behalf of the
Karnataka State Co-operative Urban Banks Federation Ltd., Bangalore - 560027.
Published at : # 132, K.H. Road, Bangalore - 560027.
Printed at : Navarathna Printers, # 35, 3rd Cross, Sudhamanagar, Bangalore – 560027.